# ಈ ಕತ್ತಲೆಯಲ್ಲಿ ಸೂರ್ಯೋದಯ ಆದೀತೆ?



■ ಸ. ರಘುನಾಥ
ಕಲೆ: ಬಾದಲ್ ನಂಜುಂಡಸ್ವಾಮಿ

ತಿರುಪತಿ ವೆಂಕಟರಮಣಸ್ವಾಮಿಯ ದರ್ಶನಕ್ಕೆ ಸಾಲಿನಲ್ಲಿ ಕುಳಿತು ಗುಡಿಯತ್ತ ನೋಡುವ ಭಕ್ತನಂತೆ ಮಾರಪ್ಪ, ಕೊಳ್ಳುದಾರರು ಯಾರಾದರು ಬಂದಾರೆಂದು ತೋಟದ ಬದುವಿನ ಹುಣಿಸೆಮರದಡಿಯ ಈರುಳ್ಳಿ ರಾಶಿಯತ್ತ ನೋಡುತ್ತ ಕುಳಿತಿದ್ದ. ಧಾರಣೆ ಇಂದು ಏರೀತು, ನಾಳೆಯಾದರೂ ಹೆಚ್ಚದಿರುವುದೇ ಎಂದು ಕಾಯವುದರಲ್ಲಿಯೇ ರಾಶಿ ಹಾಕಿ ತಿಂಗಳು ದಾಟಿತ್ತು. ಎಲ್ಲಿ ಕಾದಿತ್ತೋ ಮಳೆ! ಎರಡು ದಿನ ನಿಂತು ಸುರಿದದ್ದೇ ಸುರಿದಿದ್ದು. ರಾಶಿಯೂ ನೆನೆಯಿತು, ವಾತಾವರಣದಲ್ಲಿ ಥಡಿಯೋ ಥಂಡಿ. ಉದ್ಧಾರ ಮಾಡುವುದೆಂದುಕೊಂಡಿದ್ದು ಕೊಳೆಯತೊಡಗಿತ್ತು. ಇದರಿಂದ ಸಾಲವಂತೂ ತೀರದೆಂದು ಖಚಿತವಾಗಿತ್ತು. ಈಗ ಮಾರಾಟವಾದರೆ ಮಗಳ ಫೀಜಿಗಾಗುವಷ್ಟಾದರೂ ಹುಟ್ಟೀತು. ಆದರೆ ಪರಿಸ್ಥಿತಿ ನೋಡಿದರೆ ಅದೂ ಆಗದು ಅನ್ನಿಸಿತು.

ಇಟ್ಟ ಬೆಳೆಯಿಂದ ಲಾಭವಿಲ್ಲದಿದ್ದರೆ ಹೋಗಲಿ, ಮುಂದಿನ ಬೆಳೆ ಇಡಲಾಗುವಷ್ಟಾದರೂ ಹುಟ್ಟುವಳಿ ಇಲ್ಲವಾದರೆ ಹೇಗೆ? ಬೆಳೆದರೂ ಬರವೇ, ಬೆಳೆಯದಿದ್ದರೂ ಬರವೇ ಅಂತಾದರೆ ಬದುಕು ಹೇಗೆಂಬ ಚಿಂತೆ ಕಾಡಿತು. ಒಂದೆರಡು ದಿನ ನೋಡಿ ತಿಪ್ಪೆಗೆ ಸುರಿಯುವುದೇ ವಾಸಿ ಅಂದುಕೊಂಡ.

ಬೆಲೆ ಕುಸಿತದಿಂದ ಒಂದು ಸಲ ನಷ್ಟವಾದರೆ, ಬೆಳೆ ನಾಶದಿಂದ ಇನ್ನೊಂದು ಸಲ ನಷ್ಟವಾಗುತ್ತಿತ್ತು. ಹೀಗಾಗುತ್ತಿರುವುದು ಇದು ಸತತ ನಾಲ್ಕನೇ ಸಲ. ಕೂಲಿಯವರಿಗೆ ಕೆಲಸ ಕೊಡುತ್ತಿದ್ದವನು ಕೂಲಿಯಾಳಾಗುವ ಸ್ಥಿತಿಗೆ ದಿನ ದಿನಾ ಹತ್ತಿರಾಗುತ್ತಿದ್ದ. ಮಡದಿಗೂ ಆ ದಿನ ದೂರವಿರಲಿಲ್ಲ. ಮನದೊಳಗೇ ತೊಳಲಾಡುತ್ತಿದ್ದ.

ಹೆಂಡತಿಯ ಮೊಂಡುತನಕ್ಕೆ ಮಣಿದು ಖಾಸಗಿ ಶಾಲೆಗೆ ಸೇರಿಸಿದ್ದ ಮಗಳ ಖರ್ಚು ಹೊರಲಾಗದ ಹೊರೆಯಾಗಿತ್ತು. ಫೀಜು ತರದೆ ಶಾಲೆಗೆ ಬರಬಾರದೆಂಬ ಶಾಲೆಯವರ ತಾಕೀತಿನಿಂದಾಗಿ ಅವಳು ವಾರದಿಂದ ಮನೆಯಲ್ಲಿಯೇ ಉಳಿದಿದ್ದಳು. ಪುಟ್ಟ ಮಗುವಿನ ಮನಸ್ಸು ಅವಮಾನದಿಂದ ನಲುಗಿತ್ತು.

ಸರ್ಕಾರಿ ಶಾಲೆಗೆ ದಾಖಲು ಮಾಡಿದ್ದರೆ ಮಗುವಿನ ಮನಸ್ಸಿಗೆ ಈ ಹಿಂಸೆ ಇರುತ್ತಿರಲಿಲ್ಲ. ಆದರೆ ಇದು ಮಡದಿಗೆ ಸುತಾರಾಂ ಇಷ್ಟವಿಲ್ಲದ ಸಂಗತಿ. ಸಹಿಸದೆ ಬೇರೆ ದಾರಿಯಿರಲಿಲ್ಲ. ಬ್ಯಾಂಕಿನ ಸಾಲ ಆ ಕಡೆಗಿರಲಿ, ಮಗಳ ಫೀಜು ಕಟ್ಟುವಷ್ಟಾದರೂ ಹಣ ಈರುಳ್ಳಿಯಿಂದ ಹುಟ್ಟೀತೆ ಎಂದರೆ ಪರಿಸ್ಥಿತಿ ಹಾಗಿರಲಿಲ್ಲ.

ಹೆಂತಿಯ ಒಡವೆಗಳು ಫೈನಾನ್ಸ್ ಕಚೇರಿಯ ತಿಜೋರಿಯಲ್ಲಿ ಬಡ್ಡಿ ಬೆಳೆಸುತ್ತ ಕುಳಿತಿದ್ದವು. ಸಾಲ ಸಿಗುತ್ತದೆ ಎಂದಿದ್ದಲ್ಲೆಲ್ಲ ಸಾಲ ಮಾಡಿಯಾಗಿತ್ತು. ಹೊಸ ಸಾಲದ ಮಾತಿಗೆ, 'ಮೊದಲು ಬಾಕಿ ಚುಕ್ತ ಮಾಡು, ಹೊಸ ಸಾಲದ ವಿಚಾರ ಆಮೇಲೆ' ಅನ್ನುವುದೊಂದೇ ಅವರ ಮಾತು. ಎಲ್ಲಿಂದ ತರುವುದು?

ಕಳೆದೆರಡು ಯುಗಾದಿಯಿಂದ ಮಡದಿಗೆ ಒಂದು ಸೀರೆ ತಂದುದಿಲ್ಲ. ತನಗಾದರೆ ಇರುವೆರಡು ಅಂಗಿ, ಚೆಡ್ಡಿ, ತುಂಡುಪಂಚೆ ಹರಿಯುವವರೆಗೆ ನಡೆದೀತು. ಆದರೆ ಹೆಂಡತಿ, ಮಗಳ ವಿಚಾರ ಹೀಗಲ್ಲ. ತರುವ ಮನಸ್ಸಿದೆ. ತರಲು ಸಾಮರ್ಥ್ಯವಿಲ್ಲ. ಇಂಥದೊಂದು ಜೀವನ ಅಗತ್ಯವೆ? ಈ ಪ್ರಶ್ನೆ ಮನಸ್ಸಿಗೆ ಬಂದ ಕೂಡಲೇ ಹೆದರಿ, ಅದು ಮನಸ್ಸಿನಲ್ಲಿ ಬೇರೂರಲು ಬಿಡಬಾರದೆಂದು ಮುಂದಿನ ಬೆಳೆಯತ್ತ ಮನಸ್ಸನ್ನು ತಿರುಗಿಸಿದ. ತಿಂಗಳ ಹಿಂದೆ ಪಕ್ಕದ ತೋಟದ ಶ್ರೀರಾಮಯ್ಯ ಇದೇ ಪ್ರಶ್ನೆ ಕೇಳಿದವನು, ಮರುದಿನ ವಿಷ ಕುಡಿದು ಪ್ರಾಣಬಿಟ್ಟಿದ್ದ. ಅವನ ಮಡದಿ ಮಕ್ಕಳ ಗೋಳಾಟ

ಮನೆಯತ್ತ ಹೊರಟಾಗ, ಈ ಬಿಸಿಲು ಹೆಣವನ್ನು ಸುಟ್ಟ ನಂತರದ ಕಿಚ್ಚಿನಂತಿದೆ. ನಡೆಯುವುದು ಕಷ್ಟವೆನಿಸಿತು. ಅದನ್ನು ಮರೆಯಲು ಮನೆಯೆಷ್ಟು ಹೆಜ್ಜೆ ದೂರಲ್ಲಿದೆಯೆಂದು ಎಣಿಸಬೇಕೆನ್ನಿಸಿತು. ನಡೆದಿದ್ದಷ್ಟು ದೂರ ಹಿಂದಕ್ಕೆ ನಡೆದು, ಹೆಜ್ಜೆಗಳನ್ನು ಎಣಿಸುತ್ತ ನಡೆಯುತ್ತಿದ್ದಾಗ ಈ ಹುಚ್ಚು ಏಕೆನಿಸಿತು.